

ಎಡದಿಂದ ಬಲಕ್ಕೆ :

1. ಸಮುದ್ರದ ಅಲೆಗಳ ಶಬ್ದ, ಎಷ್ಟು ಒಳ್ಳೇ ಹಿತಕರ ! (4)
3. ಭಾರೀ ಫಲಕದ ಮೇಲಿನ ಚಿತ್ರ ತಲೆ ಬುರುಡೆಯೇ ತಾನೇ ? (3)
4. ಖಜಾನೆಯ ಅಧಿಕಾರಿ, ಅವನ ತಂದೆ (3)
6. ಆತನ ಅಭ್ಯಾಸಗಳನ್ನು ಕಂಡರೇ ಹೆದರಿಕೆ ಬರಿಸುವಂತಿವೆ (4)
7. ಸೌಂದರ್ಯದ ಆಕರ ; ಅಮೃತ ಬೆರೆತ ಚಂದ್ರ ! (4)
9. ನಕಾಶೆಗಳಿಗೆಲ್ಲ ಈಗ ಹಾಳಾಗುವ ಸಮಯ (4)
11. ಗಿಡ ನೆಡಿಸು; ಅಡ್ಡ ಬರುವವರನ್ನು ಹೆದರಿ ಕಂಪಿಸುವಂತೆ ಮಾಡು (4)
13. ಕಣ್ಣೀರು ತರಿಸುವ ಬದಲು ದಯೆ ತೋರಿಸು (4)
15. ಹೊಂಬಿಸಿಲು ಹಾಗೆಯೇ ಉಳಿದಿರಲೆಂದು ಆಸೆಪಡು (4)
17. ಕಿರುತೆರೆಯ ಮೇಲೆ ಪ್ರಸಿದ್ಧನಾಗಿದ್ದಾನೆ, ಬೇಡ (3)
18. ವಜ್ರಗಳನ್ನು ಸುರಿದರೂ ಬಿಟ್ಟಾನೆಯೇ ಯಮರಾಯ ? (3)
19. ಕೆಟ್ಟವನ ಹುಟ್ಟು ಗುಣ ಈ ಕ್ರೂರ ಬುದ್ಧಿ (4)

ಮೇಲಿಂದ ಕೆಳಕ್ಕೆ:

1. ಆ ಸಭೆಯಲ್ಲಿ ಭಾಗವಹಿಸಲು ಶ್ರಮ ಏನಿಲ್ಲ (3)
2. ಖರ್ಜೂರದ ಮಾರಾಟ ಆರಂಭಿಸಿದ್ದಾನೆ ನೋಡಿ ಅಗಸ (3)
3. ಕಳ್ಳನಂತೆ ಕಂಡನೆಂಬುದೇ ಭಾರೀ ದೋಷ (3)
5. ಕೆಕ್ಕರಿಸಿ ಕೂಗಿದ ಧ್ವನಿ, ಅಬ್ಬ, ಎಷ್ಟು ಒರಟು ! (3)
7. ಮಾಸಾಶನ ಅಧಿಕವಾಯಿತೆಂದು ಬಹಳ ಹಿಗ್ಗು (3)
8. ತ್ರಾಸವನ್ನೆಲ್ಲ ಮರೆಯುವಂತೆ ಸಮಾಧಾನ ಪಡಿಸು (3)
9. ಅನ್ಯಾಯದ ಕಾರ್ಯಗಳನ್ನು ನಿಲ್ಲಿಸಲಿಕ್ಕೆ ತಕ್ಕ ಮುಂದಾಳು ಬೇಕು (3)
10. ಸುಶಿಕ್ಷಿತರ ಕೆಲಸದ ಕಡೆಗೆ ಸೂಕ್ಷ್ಮವಾಗಿ ಗಮನ ನೀಡು (3)
12. ಕೂಗಿ ಕರೆದರಷ್ಟೇ ಬಂದಾನು ಗ್ರಾಹಕ (3)
14. ಧರೆಯ ರಕ್ಷಣೆಗೆಂದು ಚೆಲ್ಲಿದ ನೆತ್ತರು (3)
15. ಹತ್ತಿರಕ್ಕೇ ಬಂದು ನಿಂತಿದ್ದ ಆ ಕೊಲೆಗಾರ (3)
16. ದಿನಸಿ ತರಲು ಪ್ರತಿ ನಿತ್ಯವೂ ಒಳ್ಳೆಯದೇ, ಬಿಡಿ (3)

## 15-02-2018ರ ಉತ್ತರಗಳು

ಎಡದಿಂದ ಬಲಕ್ಕೆ :
1. ಬಹುವಿಧ ; 3. ಕನ್ನಡ ; 4. ರಜತ ; 6. ವಜ್ರಮಣಿ ; 7. ಭವ್ಯತೆ ; 9. ಭರತ ; 11. ನಗರ ; 13. ಸುಮಾರು ; 15. ಕುಟಿಲತೆ ; 17. ಮೆಣಸು ; 18. ಗಳಿಕೆ ; 19. ಮರುಬಾಳು

ಮೇಲಿಂದ ಕೆಳಕ್ಕೆ :
1. ಬಡವ ; 2. ಧರಣಿ ; 3. ಕರ್ತವ್ಯ ; 5. ತವರ ; 7. ಭವನ ; 8. ತೆಪರ ; 9. ಭಕ್ಷೀಸು ; 10. ತಳಿರು ; 12. ಗರಿಮೆ ; 14. ಮಾಲಿಕೆ ; 15. ಕುಸುಮ ; 16. ತೆಗಳು

ಪ್ರಶ್ನಾ ಂಕಣ

# ಗೋಸುಂಬೆ ನಾಲಿಗೆ: ಏನು ವಿಶೇಷ?

ಗೋಸುಂಬೆ ಅಥವಾ ಊಸರವಳ್ಳಿ, ಅದೊಂದು ವಿಶಿಷ್ಟ ಹಲ್ಲಿ. 'ಅಗತ್ಯಕ್ಕೆ ಅನುಗುಣವಾಗಿ ಬಣ್ಣ ಬದಲಿಸಿಕೊಳ್ಳುವ ಗುಣ'ದಿಂದಾಗಿ ಅದು ಸುಪ್ರಸಿದ್ಧ ( ಅಂಥ ಎರಡು ನಿದರ್ಶನಗಳನ್ನು ಚಿತ್ರಗಳಲ್ಲಿ ಗಮನಿಸಿ ). ಗೋಸುಂಬೆಯ ಈ ಸಾಮರ್ಥ್ಯ ಎಷ್ಟು ಪರಿಪೂರ್ಣವೆಂದರೆ ಸ್ವಾರ್ಥ ಸಾಧನೆಗೆ ಸಂದರ್ಭಕ್ಕೆ ಸರಿಯಾಗಿ ಮಾತುನಿಲುವು ಬದಲಿಸಿಕೊಳ್ಳುವ ಸಮಯ ಸಾಧಕತನದ ಪ್ರತಿಮೆಯಾಗಿಯೇ ಗೋಸುಂಬೆ ವಿಶ್ವ ವಿಖ್ಯಾತ !

ಆದರೆ ಅದಕ್ಕಿಂತ ವಿಶೇಷವಾದದ್ದು ಗೋಸುಂಬೆಯ ನಾಲಿಗೆ. ಪ್ರಮುಖವಾಗಿ ಕೀಟಾಹಾರಿಯಾಗಿರುವ ಗೋಸುಂಬೆಯ ಬೇಟೆಯ ಸಾಧನವಾದ ಅದರ ನಾಲಿಗೆ ರಚನಾ ಕ್ರಮದಲ್ಲೂ, ಬಳಕೆಯ ವಿಧಾನದಲ್ಲೂ ಜೀವಲೋಕದಲ್ಲೇ ಅತ್ಯಂತ ವಿಶಿಷ್ಟ, ವಿಸ್ಮಯಕರ. ಏಕೆಂದು ನೀವೇ ನೋಡಿ :

ವಾಸ್ತವವಾಗಿ ಗೋಸುಂಬೆಯ ನಾಲಿಗೆ "ಎಲುಬು ರಹಿತ" ಅಲ್ಲ ! ಗೋಸುಂಬೆಯ ಬಾಯಲ್ಲಿ ಹಿಂಬದಿಯಿಂದ ಹೊರಟು ಮಧ್ಯದಲ್ಲಿ ಮಡಿಸಲಾಗುವಂತಹ ಮೃದ್ವಸ್ಥಿಯ ಒಂದು ದೃಢ ನಿರ್ಮಿತಿ ಇದೆ. ಅದನ್ನು ಆವರಿಸಿ, ಒತ್ತೊತ್ತಾಗಿ ಜೋಡಿಸಿದ ಉಂಗುರಗಳಂತಹ ಸ್ನಾಯುಗಳಿಂದಾದ ಮೆತ್ತನ್ನ ಮಾಂಸಖಂಡದ ಹೊದಿಕೆ. ಹೀಗೆ ರಚನೆಗೊಂಡ ನಾಲಿಗೆಯ ಮುಂತುದಿಯದು ಅಗಲ ತಲೆಯ ಗದೆಯಂತಹ ಆಕಾರ ; ಈ ಭಾಗ ಅಂಟು ಅಂಟಾದ ವಿಶೇಷ ದ್ರವದಿಂದ ಲೇಪಿತ ಕೂಡ ( ಚಿತ್ರ2). ಬಾಯಿ ಮುಚ್ಚಿರುವಾಗ ಇಡೀ ನಾಲಿಗೆ ಗೋಸುಂಬೆಯ ಕೆಳ ದವಡೆಯಲ್ಲಿ, ಗಂಟಲ ಸನಿಹದಲ್ಲಿ ಅಡಕಗೊಂಡಿರುತ್ತದೆ. ಈ ಬಗೆಯ ರಚನೆಯಿಂದಾಗಿ ಗೋಸುಂಬೆ ತನ್ನ ನಾಲಿಗೆಯನ್ನು ಗುರಿ ಇಟ್ಟು ಕ್ಷಣಾರ್ಧದಲ್ಲಿ ಮಿಂಚಿನ ವೇಗದಲ್ಲಿ



ಎಸೆಯುವಂತೆ ಚಾಚಬಲ್ಲದು ; ಎಳೆದ ಸ್ಪ್ರಿಂಗ್ ಅನ್ನು ಬಿಟ್ಟೊಡನೆ ಅದು ತಂತಾನೇ ಮೊದಲ ಸ್ಥಿತಿಗೆ ವಾಪಸ್ಸಾಗುವಂತೆ ಈ ನಾಲಿಗೆಯೂ ಕುಗ್ಗಬಲ್ಲದು ! ವಿಸ್ಮಯ ಏನೆಂದರೆ, ಗೋಸುಂಬೆಯ ನಾಲಿಗೆ ಸೆಕೆಂಡ್ ಗೆ ಆರು ಮೀಟರ್ ವೇಗದಲ್ಲಿ, ಇಡೀ ಶರೀರದ ಒಂದೂವರೆ ಪಟ್ಟು ಉದ್ದಕ್ಕೆ ಚಾಚಬಲ್ಲ ಸಾಮರ್ಥ್ಯ ಹೊಂದಿದೆ (ಚಿತ್ರ2 ರಲ್ಲಿ ಗಮನಿಸಿ)!

ಸೂಕ್ಷ್ಮ ದೃಷ್ಟಿ ಶಕ್ತಿಯನ್ನೂ ಹೊಂದಿರುವ ಗೋಸುಂಬೆ ಬಹು ದೂರದಿಂದಲೇ ಆಹಾರ ಕೀಟಗಳನ್ನು ಗುರುತಿಸುತ್ತದೆ. ಹಾಗೆ ಕಂಡ ಬಲಿಯತ್ತ ಗುರಿ ಇಡುತ್ತದೆ. ಬಾಯ್ದೆರೆದು ಅದರತ್ತ ನಾಲಿಗೆಯನ್ನು 'ಎಸೆಯುತ್ತದೆ'. ಕಣ್ಣೆವೆಯಿಕ್ಕುವಷ್ಟರಲ್ಲಿ ನಡೆವ ಈ ಧಾಳಿಯಲ್ಲಿ ಕೀಟ ಗೋಸುಂಬೆಯ ನಾಲಿಗೆಯ ತುದಿಗೆ ಅಂಟಿಕೊಳ್ಳುತ್ತದೆ ; ಅದರ ಬಾಯನ್ನು ಸೇರುತ್ತದೆ. ಇದೇ ಗೋಸುಂಬೆಯ ನಾಲಿಗೆಯ ವಿಶೇಷ.

■ ಎನ್. ವಾಸುದೇವ್